ತಾರೀಖು 22ನೇ ಫಿಬ್ರವರೀ 1884.

ನಂ. 323.—ಕಡೂರು ಡಿಸ್ಟ್ರಿಕ್ಟು ಯಿಡೇಹಳ್ಳಿ ಡೆಪ್ಯುಟಿ ಅಮಲ್ದಾರ್ ಮಹಮ್ಮದಲ್ಲೀಖಾನರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಗಾಯತು ಯೆರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಕಚ್ಚೇರಿ ಹೆಡ್ ಅಕೌಂಟೆಂಟ್ ವೆಂಕಟವರದಯ್ಯಂಗಾರ್ರಿಗೆ, ಮಹಮ್ಮದಲ್ಲೀಖಾನರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವತನಕ, ಯಿಡೇಹಳ್ಳಿ ಡೆಪ್ಯುಟಿ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟ ರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 324.—ಸ್ನ 1877ನೇ ಇಸವಿಯ IIIನೇ ರಿಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ, ಮೈಸೂರು ಅ॥ ಕಮ್ಮಿಷನರ ರ ಕೋರ್ಟು ಶಿರಸ್ತೇದಾರ್ ತಿರುಮಲಾಚಾರ್ಯರು, ಮತ್ತೊಂದು ಹುಕ್ಕುಂ ಕೊಡುವ ತನಕ, ಬೇರೆ ಕೆಲಸಕ್ಕೆ ಮೊಕರರ್ ಮಾಡಲ್ಪಟ್ಟ ರಂಗ ರಾಯರಿಗೆ ಬದಲಾಗಿ, ಮೈಸೂರು ತಾಲ್ಲೂಕು ಸ್ಪೆಷಲ್ ಸಬ್ ರಿಜಿಸ್ಟ್ರಾರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 325.—ಮಂಡ್ಯ ತಾಲ್ಲೂಕು ಅಮಲ್ದಾರ್ ಮೆಹಾಬಲ್‌ರಾಯರು, ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿನ ಹಂಗಾಮೀ ಚಾರ್ಜನ್ನು ವಹಿಸುವಂತೆ ನೇಮಿಸಲ್ಪಟ್ಟಿರುತ್ತಾರೆ.

ನಂ. 326.—ತುರುವೇಕೆರೆ ಡೆ॥ ಅಮಲ್ದಾರ್ ಮಿರ್ನಿಜಾಮುದ್ದೀನ್ ಅಲ್ಲೀಖಾನರು, ರಜಾದ ಮೇಲಿರುವ ಅಮಲ್ದಾರ್ ವೇಲಾ ಯುಧಂ ಪಿಳ್ಳೆಯವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ತನಕ ತುಮಕೂರು ಡಿಸ್ಟ್ರಿಕ್ಟು ತಿಪಟೂರು ತಾ ಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ಗುಬ್ಬಿ ಪೊಲೀಸ್ ಇನ್ಸ್‌ಪೆಕ್ಟರ್ ನಾಗೇಶ್ವರಯ್ಯನವರು, ಮಿರ್ ನಿಜಾಮುದ್ದೀನ್ ಅಲ್ಲೀಖಾನರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ತನಕ, ತುರುವೇಕೆರೆ ಡೆ॥ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ನಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ನಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

"ಬಮೋಜೀಬ್ ಹುಕ್ಕುಂ"

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ತಾರೀಖು 22ನೇ ಮಾರ್ಚೀ 1883.

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ನ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಿಗ್ಗೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡ್ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

"ಬಮೋಜೀಬ್ ಹುಕ್ಕುಂ,"

ಸಿ. ರಾಘವಾಚಾರ್ಲು,
ಪ್ರೈವೇಟ್ ಸೆಕ್ರಟೇರಿ.